**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಬ್ಯಾಡಗಿ.**

**ಓ ಎಸ್.ನಂ. 36/2020.**

ಡಿ **ಡಬ್ಲ್ಯೂ: 2**

| | | |
|---|---|---|
| ಹೆಸರು | : | ಪ್ರಶಾಂತ ದೊಡ್ಡಮನಿ |
| ಗಂಡನ ಹೆಸರು | : | ಚೆನ್ನಬಸಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವಕೀಲ ವೃತ್ತಿ |
| ।ವಾಸಸ್ಥಳ | : | ಹಿರೇನಂದಿಹಳ್ಳಿ |

**ದಿನಾಂಕಃ 03–09–2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ 3 ಮತ್ತು 5 ನೇ ಪ್ರತಿವಾದಿ ಪರ ಶ್ರೀ ಎಂ.ಬಿ.ಹೆಚ್. ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ನಿಜ ಇರುತ್ತವೆ. ಅವುಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿ ನನ್ನ ಸಹಿ ಇರುತ್ತದೆ.

ಈಗ ಸಾಕ್ಷಿಗೆ ನಿಡಿ-7 ದಾನಪತ್ರವನ್ನು ತೋರಿಸಿದ್ದು ಸದರಿ ದಾನಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಡಿ-7 ಎಂದು ಗುರುತಿಸಲಾಗಿತ್ತು. ಸದರಿ ದಾನಪತ್ರವನ್ನು ಬರೆದುಕೊಟ್ಟವರು ಶಿವನಗೌಡ ಪಾಟೀಲ ಎಂಬುವವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಡಿ-7 ಬಿ ಎಂದು ಗುರುತಿಸಲಾಯಿತು. ಸದರಿ ನಿಡಿ-7 ರ ಮೇಲಿರುವ 5 ನೇ ಪ್ರತಿವಾದಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಡಿ-7 ಸಿ ಎಂದು ಗುರುತಿಸಲಾಯಿತು. ಸದರಿ ನಿಡಿ-

7 ಕೈ ಸಾಕ್ಷಿದಾರರಾಗಿ ಸಿದ್ದನಗೌಡ ಪಾಟೀಲ ಹಾಗೂ ಮಲ್ಲೇಶಪ್ಪ ಎಂಬುವವರು ಸಹಿ ಮಾಡಿದ್ದು ಸದರಿಯವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಅದನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಡಿ-7 ಡಿ ಮತ್ತು ಇ ಎಂದು ಅನುಕ್ರಮವಾಗಿ ಗುರುತಿಸಲಾಯಿತು. ಸದರಿ ನಿಡಿ-7 ರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ-7 ಎಫ್ ಎಂದು ಗುರುತಿಸಲಾಯಿತು.

ಎದುರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.